ಬಿ.ಪ್ಯಾಕ್
ಅಂದದೂರು ಬೆಂಗಳೂರು

ELECTION HABBA
#LetsMakeDemocracyWork

# ಗೋವಿಂದರಾಜನಗರ

## ನಾಗರಿಕ ಪ್ರಣಾಳಿಕೆ

Mobility & Infrastructure | Waste management | Health | Water & Sanitation | Women & Child | Environment

ಏಪ್ರಿಲ್ 2018

## ಗೋವಿಂದರಾಜನಗರ ಒಳನೋಟ

1. ಪ್ರದೇಶ: 10.5 sq. km

2. ಜನಸಂಖ್ಯೆ : 305725

3. ವಾರ್ಡ್ :ಕಾವೇರಿಪುರ, ಗೋವಿಂದರಾಜನಗರ, ಅಗ್ರಹಾರ ದಾಸರಹಳ್ಳಿ ಡಾ.ರಾಜಕುಮಾರ್ ವಾರ್ಡ್, ಮಾರೇನಹಳ್ಳಿ ಮಾರುತಿಮಂದಿರ ಮೂಡಲ್‌ಪಾಳ್ಯ, ನಾಗರಭಾವಿ, ನಾಯಂಡಹಳ್ಳಿ

5. ಒಟ್ಟು ಗೃಹಗಳು : 76919

7. ರಸ್ತೆ ವಿಸ್ತೀರ್ಣ : 303 km

8) ಕೆರೆಗಳು : ಮಲಗಳ, ನಾಯಂಡಹಳ್ಳಿ, ಬಾಲಾಯನಕೆರೆ

9) ಆರಕ್ಷಕ ಠಾಣೆ :ಬಸವೇಶ್ವರನಗರ, ವಿಜಯನಗರ ಚಂದ್ರುಲೇಔಟ್

10. ಬಸ್ ನಿಲ್ದಾಣಗಳು : 99

11. ಅಗ್ನಿಶಾಮಕ ಕೇಂದ್ರ :0

12. ಸರ್ಕಾರಿ ಶಾಲೆಗಳು :20

13. ಆಟದ ಮೈದಾನ :14

## ಸರಳವಾಗಿ ನಾವು ಕೇಳುವುದಿಷ್ಟೆ

1)ನಾಗರೀಕರು ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗುವಂತೆ ನಾಗರಿಕ ಸಂಸ್ಥೆಗಳು ಮಹಾನಗರಪಾಲಿಕೆ ಸದಸ್ಯರು ಮತ್ತು ನಾಗರಿಕ ಗುಂಪುಗಳೊಂದಿಗೆ ಶಾಸಕರು ಮಾಸಿಕ ಸಾಮಾನ್ಯ ಸಭೆ ನೆಡಸಬೇಕು.

2)ಕ್ಷೇತ್ರದ ಅಭಿವೃದ್ಧಿಗಾಗಿ ತೆಗೆದುಕೊಂಡು ಕ್ರಮಗಳು ಮತ್ತು ಸ್ಥಳೀಯ ಪ್ರದೇಶ ಅಭಿವೃದ್ಧಿ ನಿಧಿ ಬಳಕೆ ಒಳಗೊಂಡಂತೆ ನಾಗರಿಕ ಬೇಡಿಕೆಗಳಗೆ

ಸಂಬಂಧಿಸಿದಂತೆ ನಾಗರಿಕಿರಗೆ ಸೂಕ್ತ ಮಾಹಿತಿಯನ್ನು ಒದಗಿಸಲು ಕ್ಷೇತ್ರದ ವೆಬ್ಸೈಟ್ ವಿನ್ಯಾಸಗೊಳಿಸಬೇಕು.

3)ಚಾಲ್ತಿಯಲಿರುವ ಹಾಗೂ ಮುಂದೆ ಕೈಗೊಳ್ಳ ಬಹುದಾದ ಕಾಮಗರಿಗಳ ಬಗ್ಗೆ ಪಾರದಾರ್ಶಕ ರೀತಿಯಲ್ಲಿ ಸಾರ್ವಜನಿಕರಿಕರೊಂದಿಗೆ ಸಮಾಲೋಚಿಸಲು ಆನ್ ಲೈನ್ ಹಾಗು ಆಫ್ ಲೈನ್ ಮೂಲಕ ಸಂಪರ್ಕ ಹೊಂದಬೇಕು.

4)ವಿಧಾನಸಭೆಯಲ್ಲಿ ಮಂಡಿಸಲಾಗುವ ವಿವಿಧ ನೀತಿ ವಿಷಯಗಳ ಬಗ್ಗೆ ಶಾಸಕರು ತಮ್ಮ ನಿಲುವನ್ನು ವ್ಯಕ್ತಗೊಳಿಸಬೇಕು. ಸಮಸ್ಯಗಳನ್ನು ಆನ್ ಲೈನ್ ಮತ್ತು ಆಫ್ ಲೈನ್ ಮೂಲಕ ನಾಗರಿಕರೊಂದಿಗೆ ಸಮಾಲೋಚಿಸಬೇಕು,

5)ಕ್ಷೇತ್ರದಲ್ಲಿ ಎದುರಾಗುವ ವಿವಿಧ ವಿಷಯಗಳಲ್ಲಿ ಭಾಗವಹಿಸಲು ನಾಗರಿಕರಿಗೆ ಸ್ವಯಂಪ್ರೇರಿತ ಅವಕಾಶಗಳನ್ನು ಕಲ್ಪಿಸಬೇಕು

6) ಕ್ಷೇತ್ರದ ಅಭಿವೃದ್ಧಿಗೆ ಸಂಭಂದಿಸಿದಂತೆ ಕಾಲೇಜು ವಿದ್ಯಾರ್ಥಿಗಳು ತರಬೇತಿ ನೀಡುವ ಅವಕಾಶವಿರಬೇಕು ಮತ್ತು ಗೃಹಿಣಿಯರು ಮತ್ತು ಹಿರಿಯ ನಾಗರಿಕರ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಾಲೇಜು ವಿದ್ಯಾರ್ಥಿಗಳು ತರಬೇತಿ ನೀಡುವ ಅವಕಾಶಗಳನ್ನು ಕಲ್ಪಿಸಬೇಕು.

7)ಸಂಬಂಧಿತ ಅಧಿಕಾರಿಗಳ ಸಂಪರ್ಕ ವಿವರಗಳು (ಬಿ.ಬಿ.ಎಂ.ಪಿ) ಬೆಸ್ಕಾಂ) ಇತ್ಯಾದಿ ಮತ್ತು ದೂರುಗಳ ಪರಿಹಾರಕ್ಕಾಗಿ ನಿಗದಿಪಡಿಸಲಾಗುವ ಸಮಯದ ವಿವರಗಳನ್ನು ವಾರ್ಡ್ ಕಛೇರಿಯಲ್ಲಿ ಮತ್ತು ಇತರ ಪ್ರಮುಖ ಸ್ಥಳಗಳಲ್ಲಿ ಪ್ರದರ್ಶಿಸಬೇಕು.

8) ಎಲ್ಲಾ ನಾಗರಿಕ ಸಂಸ್ಥೆಗಳ ಬಯೋಮೆಟ್ರಿಕ್ ಹಾಜರಾತಿ ಕಡ್ಡಾಯ ಮಾಡಬೇಕು

9) ಕ್ಷೇತ್ರಕ್ಕೆ ಸಂಬಂಧಿಸಿದ ಪ್ರಗತಿಯ ತ್ರೈಮಾಸಿಕ ವರದಿ ನಾಗರಿಕರಿಗೆ ಲಭ್ಯವಾಗಬೇಕು

10) ಮೂಲೆ ನಿವೇಶನಗಳು ಹಾಗು ಇತರ ಸೌಲಭ್ಯಗಳ ವಿವರಗಳನ್ನು ಒಳಗೊಂಡ ಕ್ಷೇತ್ರದ ನಕ್ಷೆ ಲಭ್ಯವಾಗುವಂತೆ ಏರ್ಪಾಡು ಮಾಡಬೇಕು

## ಗೋವಿಂದರಾಜನಗರ

## ಪ್ರಮುಖ 5 ಬೇಡಿಕೆಗಳು

### ತ್ಯಾಜ್ಯ ನಿರ್ವಹಣೆ

1. ಒಣ ಹಾಗೂ ಹಸಿ ಕಸಕ್ಕೆ ಪ್ರತ್ಯೇಕ ವಾಹನಗಳನ್ನು ಹೊಂದಿರುವಂತೆ ವೈಜ್ಞಾನಿಕ ರೀತಿಯಲ್ಲಿ ತ್ಯಾಜ್ಯ ಸಂಗ್ರಹಣೆ. ವಾಹನಗಳಿಗೆ ಜಿಪಿಎಸ್ ಟ್ರ್ಯಾಕರ್ ಅಳವಡಿಸಿರಬೇಕು.

2. ಸಣ್ಣ ವಾಹನಗಳಿಂದ ದೊಡ್ಡ ವಾಹನಗಳಿಗೆ ವರ್ಗಾಯಿಸಲು ಅನುಕೂಲವಾಗುವಂತೆ ವೈಜ್ಞಾನಿಕ ವರ್ಗ ಸ್ಥಳಗಳ ಸ್ಥಾಪನೆ

3. ಗೋವಿಂದರಾಜನಗರ ಕ್ಷೇತ್ರದಾದ್ಯಂತ ಕಣ್ಣಿಗೆ ಗೋಚರಿಸುವಂತಹ ಸ್ವಚ್ಛತೆಯನ್ನು ಆದ್ಯತೆಯಾಗಿಸಿಕೊಳ್ಳಬೇಕು. ವಿಜಯನಗರ ಟೆಲಿಫೋನ್ ಪಾಯಿಂಟ್‌ನಲ್ಲಿನ ಗಲೀಜು ಜಾಗ ಸೇರಿದಂತೆ ಗೋವಿಂದರಾಜನಗರದಲ್ಲಿರುವ ಎಲ್ಲಾ ಗಲೀಜು ಪ್ರದೇಶಗಳನ್ನು ಗುರುತಿಸಬೇಕು, ಸುಂದರಗೊಳಿಸಬೇಕು ಮತ್ತು ಎಚ್ಚರದಿಂದ ಮೇಲ್ವಿಚಾರಣೆ ಮಾಡಬೇಕು.

4. ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಹಣ ಮಂಜೂರಾಗಿದ್ದರೂ ಸ್ಥಳವನ್ನು ಮಂಜೂರು ಮಾಡಿರಲಿಲ್ಲ. ಹಸಿ ಕಸ ಮತ್ತು ತೋಟದ ಕಸವನ್ನು ಸಂಸ್ಕರಿಸುವ ಘಟಕಗಳಿಗೆ ಸ್ಥಳ ಮಂಜೂರು ಮಾಡಲೇಬೇಕಿದೆ.

5. ದೇವಸ್ಥಾನಗಳು, ಶಿಕ್ಷಣ ಸಂಸ್ಥೆಗಳು, ರೆಸ್ಟೋರೆಂಟ್‌ಗಳು, ಆಸ್ಪತ್ರೆಗಳು ಮತ್ತು ಇತರೆ ಬೃಹತ್ ಪ್ರಮಾಣದಲ್ಲಿ ಕಸ ಉತ್ಪಾದಿಸುವವರನ್ನು ಶೂನ್ಯ ಕಸದ ಮೂಲವಾಗುವುದಕ್ಕೆ ಉತ್ತೇಜನ ಮತ್ತು ಬೆಂಬಲಿಸಬೇಕು.

### ಸಂಚಾರ ಮತ್ತು ಸಾರಿಗೆ

1. ಪಾರ್ಕಿಂಗ್ ಸೌಲಭ್ಯ ಮತ್ತು ಬಸ್‌ಸ್ಟ್ಯಾಂಡ್ ಹಾಗೂ ಮೆಟ್ರೋ ಸ್ಟೇಷನ್‌ನಿಂದ ಕೊನೆಯ ಹಂತದವರೆಗೆ ಸಂಪರ್ಕ ದೊರಕಿಸಿಕೊಡಬೇಕು.

2. ಗೋವಿಂದರಾಜನಗರದಾದ್ಯಂತ ಪಾದಚಾರಿ ಸ್ನೇಹಿ ಮತ್ತು ಪ್ರವೇಶಿಸಬಹುದಾದಂತಹ ಪಾದಚಾರಿ ರಸ್ತೆಗಳು

3. ತಜ್ಞರ ಸಹಾಯದಿಂದ ಪ್ರಶಾಂತನಗರದಿಂದ ಮಾಳಗಾಳ (ಸುಮ್ಮನಹಳ್ಳಿ) ವರೆಗಿನ ರಸ್ತೆಗಳಂತೆ ಹೆಚ್ಚು ಟ್ರಾಫಿಕ್ ದಟ್ಟಣೆಯಿರುವ ಪ್ರದೇಶಗಳಲ್ಲಿ ವಾಹನದಟ್ಟಣೆಯ ಒತ್ತಡ ನಿವಾರಿಸುವುದು.

4. ಗೋವಿಂದರಾಜನಗರದಲ್ಲಿ ಕೈಗೊಳ್ಳಲಾದ ರಸ್ತೆ ಕಾಮಗಾರಿಗಳ ವಿವರಗಳನ್ನು ನೀಡುವುದು.

5. ಪಾದಚಾರಿ ಕ್ರಾಸಿಂಗ್ ಮತ್ತು ಇತರೆ ಅಗತ್ಯವಿರುವ ಪ್ರದೇಶಗಳಲ್ಲಿ ವೈಜ್ಞಾನಿಕ ರಸ್ತೆ ಉಬ್ಬುಗಳ ನಿರ್ಮಾಣ

## ನೀರು

1. ಸಣ್ಣ ಕೈಗಾರಿಕೆಗಳಿಂದ ಹೊರಹಾಕಲಾಗುವ ತ್ಯಾಜ್ಯ ನೀರಿನ ನಿರ್ವಹಣೆಯನ್ನು ಪರಿಶೀಲಿಸಬೇಕಿದೆ. ಸಣ್ಣ ಕೈಗಾರಿಕೆಗಳಲ್ಲಿ ಕೊಳಚೆ ನೀರು ಸಂಸ್ಕರಣಾ ಘಟಕಗಳನ್ನು ಕಡ್ಡಾಯ ಮಾಡಬೇಕಿದೆ.

2. ನೀರು ಸರಬರಾಜು ಮಾಡುವ ಸಮಯದ ಮಾಹಿತಿಯನ್ನು ನಾಗರೀಕರಿಗೆ ತಿಳಿಯುವಂತೆ ಮಾಡಬೇಕು.

3. ನೀರು ಸಂರಕ್ಷಣೆ ಕುರಿತು ಜಾಗೃತಿ ಮೂಡಿಸುವ ಅಭಿಯಾನವನ್ನು ನಡೆಸಬೇಕು ಮತ್ತು ಮಳೆನೀರು ಕೊಯ್ಲು ತಜ್ಞರು ಮತ್ತು ನೀರು ಉಳಿಸುವ ವಾಯುಪೂರಕ (ಏರೇಟರ್)ದÀಂತಹ ಸಾಧನಗಳ ಮಾಹಿತಿ ಸುಲಭವಾಗಿ ದೊರೆಯಲು ಕಿಯೋಸ್ಕ್‌ಗಳು ಲಭ್ಯವಾಗುವಂತೆ ಮಾಡಬೇಕು

4. ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ಸಾರ್ವಜನಿಕ ಕಟ್ಟಡಗಳಲ್ಲಿ ಮಳೆನೀರು ಕೊಯ್ಲು ಸಾಧನವನ್ನು ಅಳವಡಿಸಬೇಕು.

5. ಮಳೆ ನೀರು ಕಾಲುವೆ ಮತ್ತು ಮೋರಿಗಳಲ್ಲಿ ಕಾಲಕಾಲಕ್ಕೆ ಹೂಳು ಎತ್ತುವುದು ಮತ್ತು ನಿರ್ವಹಿಸುವುದು

## ಮಹಿಳೆಯರ ಮತ್ತು ಮಕ್ಕಳ ಸುರಕ್ಷತೆ

1. ಮಕ್ಕಳ ಸುರಕ್ಷಾ ನೀತಿಯನ್ನು ಶಾಲೆಗಳಲ್ಲಿ ಅಳವಡಿಸಲು ಬೆಂಬಲ

2.	ಗೋವಿಂದರಾಜನಗರದಲ್ಲಿ ಸರಗಳ್ಳತನವೇ ಪ್ರಮುಖ ಸುರಕ್ಷಾ ಸಮಸ್ಯೆಯಾಗಿದೆ. ಸಾರ್ವಜನಿಕ ಜಾಗಗಳನ್ನು ಸುರಕ್ಷಿತವಾಗಿರಿಸಲು ಕ್ರಮಗಳನ್ನು ಕೈಗೊಳ್ಳಬೇಕು. ಸಾರ್ವಜನಿಕರ ತೊಂದರೆಗಳನ್ನು ನಿವಾರಿಸಲು ಸಾರ್ವಜನಿಕ ಜಾಗಗಳಲ್ಲಿ ಉತ್ತಮ ಬೆಳಕಿನ ವ್ಯವಸ್ಥೆ, ಪಾದಚಾರಿ ಮಾರ್ಗಗಳ ಲಭ್ಯತೆ, ಸಾಕಷ್ಟು ಪೊಲೀಸ್ ಗಸ್ತು ತಿರುಗುವಿಕೆ ಮತ್ತು ಸಿಸಿಟಿವಿಗಳ ವ್ಯವಸ್ಥೆಯಂತಹ ಕ್ರಮಗಳ ಜಾರಿ

3.	ಅಳವಡಿಸಲಾದ ಸಿಸಿಟಿವಿ ನಿಗಾವಣೆಗೆ ಅಗತ್ಯ ಪ್ರಕ್ರಿಯೆಯನ್ನು ಸಿದ್ಧಗೊಳಿಸುವುದು.

4.	ವಿವಿಧ ರೀತಿಯ ಆದಾಯ ಗುಂಪುಗಳಲ್ಲಿನ ಮಹಿಳೆಯರಿಗೆ ಸುರಕ್ಷತೆ ಮತ್ತು ಸಬಲೀಕರಣ ಸಂಪನ್ಮೂಲಗಳ ಕುರಿತು ಜಾಗೃತಿ ಬೆಳೆಸುವುದು

5.	ಗೋವಿಂದರಾಜನಗರದಾದ್ಯಂತ ಪೊಲೀಸ್ ಚೌಕಿಗಳು ಮತ್ತು ನಿರಂತರ ಪೊಲೀಸ್ ಗಸ್ತು ತಿರುಗುವಿಕೆ

## ಪರಿಸರ ಮತ್ತು ಆರೋಗ್ಯ

1.	ಗೋವಿಂದರಾಜನಗರದಲ್ಲಿರುವ  ಹಸಿರು ವಲಯ (ವೈಜ್ಞಾನಿಕವಾಗಿ ಮರ ಕತ್ತರಿಸುವಿಕೆ) ಮತ್ತು ಬಯಲು ಪ್ರದೇಶಗಳ ನಿಗಾವಣೆ ಮತ್ತು ನಿರ್ವಹಣೆ ಮಾಡಬೇಕು

2.	ನಿರೋಧಕ ಆರೋಗ್ಯ ರಕ್ಷಣೆ ಕ್ರಮಗಳಿಗೆ ಆದ್ಯತೆ

3.	ಗೋವಿಂದರಾಜನಗರದಲ್ಲಿ ಕೈಗೆಟುಕುವ ದರದಲ್ಲಿ ಆರೋಗ್ಯ ರಕ್ಷಣೆ ನೀಡಲು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ಒಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಅಗತ್ಯವಿದೆ

4.	ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ಪಾರ್ಕ್‌ಗಳಲ್ಲಿ ಶೌಚಾಲಯಗಳ ಸುಲಭ ಲಭ್ಯತೆ

5.	ವಾಯು ಗುಣಮಟ್ಟ ಮತ್ತು ಗದ್ದಲ ಪ್ರಮಾಣ ನಿಗಾ ಇರಿಸುವ ಸೂಚಕಗಳನ್ನು ಅಳವಡಿಸಬೇಕು. ಶಾಲೆಗಳು ಮತ್ತು ಆಸ್ಪತ್ರೆಗಳ ಸುತ್ತಲೂ ಗದ್ದಲ ಪ್ರಮಾಣವನ್ನು ತಗ್ಗಿಸಲು ಕ್ರಮ ಕೈಗೊಳ್ಳಬೇಕು.